

# ಗಾಂಧಿನಗರ ಪೋಸ್ಟ್

■ ರಘು

## ಆಟ ಶುರು..

ಪುನೀತ್ ಹಾಗೂ ಯೋಗರಾಜ ಭಟ್‌ರ ಬಹು ನಿರೀಕ್ಷಿತ 'ಪರಮಾತ್ಮ' ಚಿತ್ರ ಸೆಟ್ಟೇರಿದೆ. ಮಾರ್ಚ್ 3ರಂದು ಸಕಲೇಶಪುರದಲ್ಲಿ ಚಿತ್ರದ ಶೂಟಿಂಗ್ ಆರಂಭವಾಗಿದೆ. ಶಿವರಾತ್ರಿಯಂದು ಬೆಂಗಳೂರಿನಲ್ಲಿ ನಡೆದ ಶಿವರಾಜ್ ಕುಮಾರ್ ರಜತ ಸಂಭ್ರಮದ 'ಮಹಾಶಿವರಾತ್ರಿ' ಕಾರ್ಯಕ್ರಮ ಮುಗಿಸಿಕೊಂಡ ಪುನೀತ್ 'ಪರಮಾತ್ಮ' ತಂಡ ಸೇರಿಕೊಂಡಿದ್ದಾರೆ.

ಪರಮಾತ್ಮನ ಲೀಲಾ ವಿನೋದಗಳಿಗೆಂದು ಭಟ್ಟರು ಮೂವರು ಚೆಲುವೆಯನ್ನು ಗೊತ್ತುಮಾಡಿದ್ದಾರೆ. ಒಬ್ಬಾಕೆ ದೀಪಾ, ಭಟ್ಟರ ಚಿತ್ರದಲ್ಲಿ ಇದೇ ಮೊದಲ ಸಲ ನಟಿಸುತ್ತಿದ್ದಾರೆ. ಇನ್ನಿಬ್ಬರು ಐಂದ್ರಿತಾ ಹಾಗೂ ರಮ್ಯಾ



ಬಾರ್ನ– ಇಬ್ಬರೂ ಭಟ್ಟರ ಗರಡಿಯಲ್ಲಿ ನುರಿತವರೇ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಹರಿಕೃಷ್ಣ ಸಂಗೀತ ಚಿತ್ರಕ್ಕಿದೆ.

ಈವರೆಗೆ ತೆರೆಯ ಮೇಲೆ ಕಾಣಿಸದ ಕರಾವಳಿಯ ಕಡಲತಡಿಯನ್ನು ಭಟ್ಟರು 'ಪರಮಾತ್ಮ'ನಲ್ಲಿ ತೋರಿಸಲಿದ್ದಾರಂತೆ. ಉಳಿದಂತೆ ಚಿತ್ರದ ಬಗ್ಗೆ ಅವರು ಯಾವುದೇ ಗುಟ್ಟು ಬಿಟ್ಟುಕೊಟ್ಟಿಲ್ಲ.

## ಹೊಸ ಲೀಡರ್?



ಕನ್ನಡ ಚಿತ್ರರಂಗಕ್ಕೊಬ್ಬ ಹೊಸ ನಾಯಕ ಸಿಗುವ ಸೂಚನೆಗಳು ದೊರೆತಿವೆ. ಈ ಸೂಚನೆಗಳು ವ್ಯಕ್ತವಾದದ್ದು, ಶಿವರಾಜ್‌ಕುಮಾರ್ ಅವರ ವೃತ್ತಿ ಜೀವನದ ಇಪ್ಪತ್ತೈದು ವರ್ಷಗಳ ಸಂಭ್ರಮಾಚರಣೆ ಕಾರ್ಯಕ್ರಮ 'ಮಹಾಶಿವರಾತ್ರಿ'ಯಲ್ಲಿ. ಭಾರೀ ಹಾರದಲ್ಲಿ ಕಂಗೊಳಿಸುತ್ತಿದ್ದ ಶಿವರಾಜ್‌ಗೆ ಶಾಲು ಹೊದಿಸಿ, ಕೈಗೆ ಬೆಳ್ಳಿಯ ಕತ್ತಿ ನೀಡಿದ ಜಗ್ಗೇಶ್, 'ಇನ್ನು ಮುಂದೆ ಶಿವಣ್ಣನೇ ನಮ್ಮ ನಾಯಕ' ಎಂದಾಗ ಅಭಿಮಾನಿಗಳಿಂದ ಸಿಳ್ಳೆ, ಚಪ್ಪಾಳೆ.

ಅವಕಾಶಗಳಿಗಾಗಿ ಪರಿತಪಿಸುತ್ತಿದ್ದ ದಿನಗಳಲ್ಲಿ ಶಿವರಾಜ್‌ಕುಮಾರ್ ಅವರನ್ನು ಸಂಪರ್ಕಿಸಿದ್ದ ಸಂದರ್ಭ ನೆನಪಿಸಿಕೊಂಡ ಜಗ್ಗೇಶ್, 'ಶಿವರಾಜ್ ಹಾಗೂ ರಣಧೀರ ಚಿತ್ರದಲ್ಲಿ ಅವಕಾಶ ನೀಡಿದ ರವಿಚಂದ್ರನ್ ತಮ್ಮೆರಡು ಭುಜಗಳಿದ್ದಂತೆ' ಎಂದು ಭಾವುಕರಾಗಿ ಬಣ್ಣಿಸಿದರು. 'ಶಿವಣ್ಣ ಚಿತ್ರರಂಗದ ನಾಯಕತ್ವ ವಹಿಸಿಕೊಳ್ಳಲೇಬೇಕು. ನಾವೆಲ್ಲ ಅವರನ್ನು ಹಿಂಬಾಲಿಸುತ್ತೇವೆ' ಎಂದ ಜಗ್ಗೇಶ್– 'ಶಿವಣ್ಣ ಸದಾ ಗೆಲ್ಲುವ ಕುದುರೆ. ಅವರಿಗೆ ಸೋಲು ಎನ್ನುವುದೇ ಇಲ್ಲ. ತಮ್ಮ ತೂಕ ಇಳಿಸಿಕೊಂಡಿರುವ ಅವರು ಸಂಪತ್ತು ಹೆಚ್ಚಿಸಿಕೊಂಡಿದ್ದಾರೆ. ನಾನು ತೂಕ ಹೆಚ್ಚಿಸಿಕೊಂಡು ಖಜಾನೆ ಬರಿದು ಮಾಡಿಕೊಂಡಿದ್ದೇನೆ' ಎಂದು ಮಾರ್ಮಿಕವಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ಕನ್ನಡ ಚಿತ್ರೋದ್ಯಮದಲ್ಲಿ ಸಿಲ್ವರ್ ಜ್ಯುಬಿಲಿ ಸಾಧಿಸಿದ ಜಗ್ಗೇಶ್, ರವಿಚಂದ್ರನ್ ಹಾಗೂ ರಮೇಶ್ ಅರವಿಂದ್ ಅವರನ್ನು ಶಿವರಾಜ್‌ಕುಮಾರ್ ಸನ್ಮಾನಿಸಿದರು.

## ಹಚ್ಚೇವು ಕನ್ನಡ ದೀಪ

ಬೆಳಗಾವಿ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಲಹರಿ ರೆಕಾರ್ಡಿಂಗ್ ಸಂಸ್ಥೆ ಮೂರು ಸಾವಿರ ಹಾಡುಗಳ ಗೀತಗುಚ್ಛ ರೂಪಿಸಿದೆ. 'ಇದು ಕನ್ನಡಿಗರಿಗೆ ಲಹರಿ ಕೊಡುಗೆ' ಎನ್ನುವುದು ಲಹರಿ ವೇಲು ಅವರ ಅನಿಸಿಕೆ.

'ಲಹರಿ ಖಜಾನೆಯಲ್ಲಿರುವ ಸುಮಾರು ಒಂದೂವರೆ ಲಕ್ಷ ಗೀತೆಗಳನ್ನು ಜಾಲಿಸಿ, ಮೂರು ಸಾವಿರ ಹಾಡುಗಳನ್ನು ಆರಿಸಲಾಗಿದೆ. ಕನ್ನಡ ಸಿನಿಮಾ, ಸಾಹಿತ್ಯ, ಜಾನಪದ, ರಂಗಭೂಮಿ ಸೇರಿದಂತೆ ಒಟ್ಟಾರೆ ಕನ್ನಡ ಸಂಸ್ಕೃತಿಯನ್ನು, ಒಟ್ಟು ಐವತ್ತು ಸೀಡಿಗಳು ಇರುವ 'ಹಚ್ಚೇವು ಕನ್ನಡದ ದೀಪ' ಎನ್ನುವ ಈ ಗೀತಗುಚ್ಛ ಪ್ರತಿನಿಧಿಸಲಿದೆ. ಕುವೆಂಪು, ಬೇಂದ್ರೆ, ಡಿ.ವಿ.ಗುಂಡಪ್ಪ, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ ಸೇರಿದಂತೆ ಕನ್ನಡದ ಪ್ರಸಿದ್ಧ ಕವಿಗಳ ಗೀತೆಗಳು ಕಾಳಿಂಗರಾವ್, ರಾಜಕುಮಾರ್, ಮೈಸೂರು ಅನಂತಸ್ವಾಮಿ, ಸಿ.ಅಶ್ವತ್ಥ್‌ರಂಥ ಮೇರು ಗಾಯಕರ ದನಿಯಲ್ಲಿ ಮೂಡಿಬಂದಿವೆ' ಎನ್ನುತ್ತಾರೆ ವೇಲು.

ಅಂದಹಾಗೆ, ಮೂರು ಸಾವಿರ ಹಾಡುಗಳ 'ಹಚ್ಚೇವು ಕನ್ನಡದ ದೀಪ' ಗುಚ್ಛದ ಬೆಲೆ 2999 ರೂಪಾಯಿ.

